**DECREE FOR SPECIFIC PERFORMANCE**
**IN THE COURT OF THE ADDL. SENIOR CIVIL JUDGE AND JMFC., AT HUNSUR**

## O.S. No.175/2025

| | |
|---|---|
| Plaintiff: | Nagarathnamma, W/o Chandregowda, Aged about 45 years, R/at Doddegowdanakoppalu Village, Kasaba Hobli, Mysore Taluk. |

**V/S**

| | |
|---|---|
| Defendant: | Rajegowda, S/o Late Devegowda @ Dyavegowda, Aged about 67 years, R/at Doddegowdanakoppalu village, Kasaba Hobli, Hunsur Taluk, Mysore Dist. |

• • • • •

**Suit Claim** : Suit was filed by the Plaintiff on 03.06.2025 for judgment and decree in favour of the plaintiff, against the defendants for the following reliefs:-

ವಾದಿಯು ಘನ ನ್ಯಾಯಾಲಯದಲ್ಲಿ ವಿನಯಪೂರ್ವಕವಾಗಿ ಪ್ರಾರ್ಥಿಸಿಕೊಳ್ಳುವುದೇನೆಂದರೆ

1. ವಾದಿಯ ಪರವಾಗಿ ತೀರ್ಪು ಮತ್ತು ಡಿಕ್ರಿಯ ಆದೇಶವನ್ನು ಮಾಡಿ ಪ್ರತಿವಾದಿಗಳು ದಾವಾ ಷೆಡ್ಯೂಲ್ ಸ್ವತ್ತಿನ ಬಾಬ್ತು ಉಳಿಕೆ ಕ್ರಯದ ಮೊಬಲಗು ರೂ.5000/– ಗಳನ್ನು ಪಡೆದುಕೊಂಡು , ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಕ್ರಯಪತ್ರ ಬರೆಯಿಸಿ ಉಪನೊಂದಣಾಧಿಕಾರಿಯವರ ಕಛೇರಿಯಲ್ಲಿ ವಾದಿಯ ಹೆಸರಿಗೆ ನೊಂದಾಯಿಸಿಕೊಡಲು ಆದೇಶಿಸಬೇಕಂತಲೂ ,

2. ಹಾಗೊಂದು ವೇಳೆ ಪ್ರತಿವಾದಿಗಳು ಕ್ರಯಪತ್ರವನ್ನು ನೊಂದಾಯಿಸಿಕೊಡದೇ ಇದ್ದ ಪಕ್ಷದಲ್ಲಿ ಘನ ನ್ಯಾಯಾಲಯವು ನ್ಯಾಯಾಲಯದ ನಿಯೋಗಿಯನ್ನು ನೇಮಕ ಮಾಡಿ ವಾದಿಯ ಹೆಸಗೆ ಕ್ರಯಪತ್ರವನ್ನು ಪ್ರತಿವಾದಿಗಳ ಪರವಾಗಿ ಬರೆದುಕೊಟ್ಟು ನೊಂದಯಿಸಿಕೊಡುವಂತೆಯೂ ಹಾಗೂ ಪರ್ಯಾಯವಾಗಿ ಪ್ರತಿವಾದಿಗಳು ಕ್ರಯದ ಕರಾರು ಪತ್ರದ ಮುಂಗಡ ಹಣ ರೂ.5,95,000/– ಗಳನ್ನು ಹಾಗೂ ಸದರಿ ಹಣಕ್ಕೆ ಶೇಖಡ 18 ಬಡ್ಡಿಯನ್ನು ಪಾವತಿಸಲು ಆದೇಶಿಸಬೇಕೆಂದತಲೂ

3. ಮತ್ತು ನ್ಯಾಯಾಲಯದ ಖರ್ಚು ಹಾಗೂ ನ್ಯಾಯಾಲಯವು ಯಥೋಚಿತವೆನಿಸುವ ಇತರೇ ಪರಿಹಾರಗಳನ್ನು ಪ್ರತಿವಾದಿಗಳು ವಾದಿಗೆ ನೀಡುವಂತೆ ಆದೇಶಿಸಬೇಕೆಂದು ನ್ಯಾಯ ಮತ್ತು ಸಮಾನತೆಯ ದೃಷ್ಟಿಯಿಂದ ಪ್ರಾರ್ಥಿಸಿಕೊಳ್ಳುತ್ತಾರೆ.

This suit came on 12th day of July 2025 for final disposal in the presence of Smt. Bhagyamma, B.Com, LL.B. Addl. Senior Civil Judge and JMFC., Hunsur, in the presence of non-judicial conciliator, Sri. Rohith K.S, Advocate for Plaintiff and Sri. Inderesh.H.T, advocate for Defendant.

Parties and their respective counsels are present and compromise Petition U/o 23 Rule 3 CPC. Contents of the compromise petition are read over and explained to the parties. Parties and their respective advocates have accepted the contents of the Compromise Petition. Compromise Petition is accepted and the suit is decreed in terms of the Compromise Petition.

**ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 23 ನಿಯಮ 3 ರ ರೀತ್ಯಾ ವಾದಿಗಳು ಮತ್ತು ಪ್ರತಿವಾದಿಗಳು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸುತ್ತಿರುವ ಜಂಟಿ ರಾಜಿ ಅರ್ಜಿ**

ವಾದಿ ಮತ್ತು ಪ್ರತಿವಾದಿಗಳು ಘನ ನ್ಯಾಯಾಲಯದಲ್ಲಿ ಈ ಕೆಳಗಿನಂತೆ ಪ್ರಾರ್ಥಿಸಿಕೊಳ್ಳುವುದೇನೆಂದರೆ,

ಪ್ರತಿವಾದಿಯು ವಾದಿಯಿಂದ ದಿನಾಂಕ 19.02.2025 ರಂದು ಷೆಡ್ಯೂಲ್ ಸ್ಥಿರ ಸ್ವತ್ತನ್ನು ಕ್ರಯಕ್ಕೆ ಕೊಡಲು ಒಪ್ಪಿ ತಮ್ಮ ದರದ್ದು ನಿಮಿತ್ತ ಅಂದರೆ ಕಾನೂನುಬದ್ದ ಅವಶ್ಯಕತೆಗಾಗಿ ಮತ್ತು ತಕ್ಕ ಸೌಕರ್ಯ ಮಾಡಿಕೊಳ್ಳಲು ಜರೂರು ಹಣದ ಅವಶ್ಯಕತೆ ಇದ್ದುದ್ದರಿಂದ ಷೆಡ್ಯೂಲ್ ಸ್ಥಿರ ಸ್ವತ್ತನ್ನು ರೂ.8,00,000/- (ಎಂಟು ಲಕ್ಷ) ರೂಪಯಿಗಳಿಗೆ ಕ್ರಯಕ್ಕೆ ಕೊಡಲು ಒಪ್ಪಿ ಸಾಕ್ಷಿಗಳ ಸಮಕ್ಷಮ

ರೂ.7,95,000/- (ಏಳು ಲಕ್ಷದ ತೊಂಬತ್ತೈದು ಸಾವಿರ) ರೂಪಾಯಿಗಳನ್ನು ಮುಂಗಡವಾಗಿ ಪಡೆದುಕೊಂಡು ಉಳಿಕೆ ಕ್ರಯದ ಮೊಬಲಗು ರೂ.5,000/- (ಐದು ಸಾವಿರ) ರೂಪಯಿಗಳನ್ನು ನೊಂದಣಿಗೆ ಬೇಕಾಗುವ ಎಲ್ಲಾ ದಾಖಲಾತಿಗಳನ್ನು ತೆಗೆದುಕೊಂಡು ಬಂದು ಉಪನೊಂದಣಾಧಿಕಲಾರಿಯವರ ಕಛೇರಿಯಲ್ಲಿ ಪಡೆದುಕೊಳ್ಳುತ್ತೇವೆಂದು ದಿನಾಂಕ 19.02.2025 ರಂದು ನೊಂದಣಿ ಕ್ರಯದ ಕರಾರು ಪತ್ರವನ್ನು ಹುಣಸೂರು ಉಪನೊಂದಣಾಧಿಕಾರಿಯವರ ಕಛೇರಿಯಲ್ಲಿ ಬರೆದುಕೊಟ್ಟಿರುತ್ತಾರೆ. ಆದರೂ ಪ್ರತಿವಾದಿಯು ದಾವಾ ಆಸ್ತಿಯ ಕ್ರಯಬದ್ದವಾದ ಶುದ್ರ ಕ್ರಯಪತ್ರವನ್ನು ಬರೆದುಕೊಡಲು ವಿಫಲವಾದ್ದರಿಂದ ವಾದಿಯು ನಿರ್ಧಿಷ್ಟ ಒಪ್ಪಂದದ ಕರಾರು ನೆರವೇರಿಕೆಗಾಗಿ ಈ ಮೇಲ್ಕಂಡ ದಾವೆಯನ್ನು ಸಲ್ಲಿಸಿತ್ತಾರೆ.

ಸದರಿ ದಾವೆಯಲ್ಲಿ ವಾದಿ ಮತ್ತು ಪ್ರತಿವಾರದಿಯು ಪಂಚಾಯಿತಿದಾರರ ಹಾಗೂ ಹಿತೈಷಿಗಳ ಹಿತವಚನದ ಮೇರೆಗೆ ಈ ದಿನ ರಾಜಿ ಮಾಡಿಕೊಂಡಿದ್ದು , ಉಳಿಕೆ ಕ್ರಯದ ಮೊಬಲಗು ರೂ.5,000/-(ಐದು ಸಾವಿರ) ರೂಪಯಿಗಳನ್ನು ವಾದಿಯಿಂದ ಈ ಪ್ರತಿವಾದಿಯು ಪಡೆದುಕೊಂಡಿರುತ್ತಾರೆ.

ಈ ದಿನದಿಂದ 3 ತಿಂಗಳ ಒಳಗಾಗಿ ದಾವಾ ಆಸ್ತಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ತೆಗೆದುಕೊಂಡು ಶುದ್ಧ ಕ್ರಯ ಪತ್ರವನ್ನು ಬರೆಯಿಸಿ ಉಪನೊಂದಣಾಧಿಕಾರಿಯವರ ಕಛೇರಿಯಲ್ಲಿ ನೊಂದಣಿ ಮಾಡಿಕೊಡುವುದಾಗಿ ಒಪ್ಪಿರುತ್ತಾರೆ. ಒಂದು ವೇಳೆ ದಾವಾ ಷೆಡ್ಯೂಲ್ ಸ್ವತ್ತನ್ನು ನೊಂದಣಿ ಮಾಡಿಕೊಡದಿದ್ದ ಪಕ್ಷದಲ್ಲಿ ವಾದಿಯೂ ನ್ಯಾಯಾಲಯದ ಡಿಕ್ರಿ ಆದೇಶದಂತೆ ಪ್ರತಿವಾದಿಗಳ ವಿರುದ್ಧ ಅಮಲ್ ಜಾರಿ ಪ್ರಕರಣವನ್ನು ಸಲ್ಲಿಸಿ ನ್ಯಾಯಾಲಯದಿಂದ ನ್ಯಾಯಾಲಯದ ನಿಯೋಗಿಯ ಮುಖಾಂತರ ನೊಂದಣಿ ಮಾಡಿಸಿಕೊಳ್ಳಬಹುದೆಂದು ಪ್ರತಿವಾದಿಯು ಒಪ್ಪಿರುತ್ತಾರೆ.

ಆದ್ದರಿಂದ ವಾದಿ ಮತ್ತು ಪ್ರತಿವಾದಿಯು ಘನ ನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ , ವಾದಿ ಮತ್ತು ಪ್ರತಿವಾದಿಯು ಈ ಮೇಲಿನಂತೆ ಈ ಮೇಲ್ಕಂಡ ದಾವೆಯನ್ನು ರಾಜಿ ಮಾಡಿಕೊಂಡಿರುತ್ತಾರೆ. ಸದರಿ ರಾಜಿ ಅರ್ಜಿ ರೀತ್ಯಾ ಹಾಗೂ ದಾವೆಯಲ್ಲಿ ಕೇಳಿರುವಂತೆ ಈ ಮೇಲ್ಕಂಡ ದಾವೆಯನ್ನು ಡಿಕ್ರಿ ಆದೇಶ ಮಾಡಬೇಕೆಂದು ನ್ಯಾಯ ಮತ್ತು ಸಮಾನತೆ ದೃಷ್ಟಿಯಿಂದ ಕೇಳಿಕೊಳ್ಳುತ್ತೇವೆ.

ಹಾಗೂ ವಾದಿಯು ಘನ ನ್ಯಾಯಾಲಯಕ್ಕೆ ಪಾವತಿಸಿರುವ ನ್ಯಾಯಾಲಯದ ಶುಲ್ಕವನ್ನು ಪೂರ್ಣ ವಾದಿಗೆ ಮರುಪಾವತಿಸುವಂತೆ ಆದೇಶಿಸಬೇಕೆಂದು ಘನ ನ್ಯಾಯಾಲಯದಲ್ಲಿ ಪ್ರಾರ್ಥಿಸುತ್ತಾರೆ.

It is ordered and decreed that the compromise petition filed by the parties U/o 23 Rule 3 CPC is hereby allowed. Consequently the suit of the plaintiff is hereby decreed in terms of compromise petition.

It is further ordered and decreed that no order as to cost.

Given under my hand and the seal of this Court on this the 12th day of July 2025.

Non Judicial Conciliator

Judicial Conciliator
Addl. Senior Civil Judge & JMFC,
Hunsur.

**MEMORANDUM OF COSTS INCURRED IN THIS SUIT**

| **Particulars** | **Plaintiffs** | **Defendant** |
|---|---|---|
| | **Rs.** | **Rs.** |
| 1. Court Fee on Plaint | 39500-00 | 00-00 |
| 2. Court Fee on Power | 00-00 | 00-00 |
| 3. Court Fee on Application | 00-00 | 00-00 |
| 4. Pleader's Fee (FC not filed) | 00-00 | 000-00 |
| 5. Process Fee | 10-00 | - |
| **Total** | **39510-00** | 00-00 |

Non Judicial Conciliator

Judicial Conciliator
Addl. Senior Civil Judge & JMFC,
Hunsur.

<u>ಷೆಡ್ಯೂಲ್</u>

ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು , ಕಸಬಾ ಹೋಬಳಿ , ಮಾದಹಳ್ಳಿ ಗ್ರಾಮಕ್ಕೆ ಸೇರಿದ, ಸ್ವತ್ತಿಗೆ ಚಕ್ಕುಬಂದಿಃ

| | |
|---|---|
| ಪೂರ್ವಕ್ಕೆಃ | ಸ್ವಾಮಿಗೌಡ ರವರ ಜಮೀನು |
| ಪಶ್ಚಿಮಕ್ಕೆಃ | ಸಣ್ಣೇಗೌಡ ರವರ ಜಮೀನು |
| ಉತ್ತರಕ್ಕೆಃ | ಸೋಮಣ್ಣ ರವರ ಜಮೀನು |
| ದಕ್ಷಿಣಕ್ಕೆಃ | ಮಾದೇಗೌಡ ರವರ ಜಮೀನು |

Non Judicial Conciliator

Judicial Conciliator
Addl. Senior Civil Judge & JMFC,
Hunsur.